ಆಗಿದೆ. ಸುಮಾರು 15 ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಡಬೇಕೆಂದು ಬಿಲ್ಲನ್ನು ಕೊಟ್ಟಿದ್ದಾರೆ. ಆ ಬಗ್ಗೆ Finance department ರವರ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ಅವರು ಏನು ಮಾಡುತ್ತಾರೆಂದು ನೋಡಿಕೊಂಡು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

## ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡುವುದು

**363 (2518) ಶ್ರೀ ಶಿವರಾಮು ಬಿ. (ಗಂಡಸಿ)** :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ನಿವೇಶನ ರಹಿತರೆಂದು ಗುರುತಿಸಿದರುವವರ ಸಂಖ್ಯೆ ಎಷ್ಟು (ಸರ್ಕಾರದ ಸಮೀಕ್ಷೆ ಅನ್ವಯ ಈಗಾಗಲೇ ಗುರುತಿಸಿ ಪ್ರಕಟಿಸಿರುವ ಪಟ್ಟಿಯನ್ನು ಜಿಲ್ಲಾವಾರು ಒದಗಿಸುವುದು);

2) 2005–06 ಮತ್ತು 2006–07 ರಲ್ಲಿ ನಿವೇಶನ ರಹಿತರಿಗೆ ಒದಗಿಸಿರುವ ನಿವೇಶನಗಳೆಷ್ಟು (ಗ್ರಾಮೀಣ ಪ್ರದೇಶವಾರು ವಿವರ ನೀಡುವುದು);

3) ಉಳಿದಿರುವ ನಿವೇಶನ ರಹಿತರಿಗೆ ನಿವೇಶನ ಒದಗಿಸುವಲ್ಲಿ ಸರ್ಕಾರದ ಯೋಜನೆಯೇನು;

4) ಯಾವಾಗ ಒದಗಿಸಲಾಗುತ್ತದೆ ಮತ್ತು ಸರ್ಕಾರದ ಗುರಿ ಇದೆಯೇ?

**ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು)** :

1) ಗ್ರಾಮೀಣ ಭಾಗದಲ್ಲಿರುವ ವಸತಿಹೀನರ ಸಮೀಕ್ಷೆಯನ್ನು 2003ರ ಜೂನ್ ಮಾಹೆಯಲ್ಲಿ ಗ್ರಾಮ ಪಂಚಾಯಿತಿಗಳ ಮುಖಾಂತರ ನಡೆಸಲಾಗಿದ್ದು ಒಟ್ಟು 1042986 ನಿವೇಶನ ರಹಿತರು ಲಭ್ಯವಿರುತ್ತಾರೆ. ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.

2) 2005–06 ಮತ್ತು 2006–07 ನೇ ಸಾಲಿನಲ್ಲಿ ಫೆಬ್ರವರಿ–07ರ ಅಂತ್ಯದವರೆಗೆ ಒಟ್ಟು 6895 ನಿವೇಶನಗಳನ್ನು ವಿತರಿಸಿದ್ದು ಜಿಲ್ಲಾವಾರು ವಿವರವನ್ನು ಅನುಬಂಧ – 2 ರಲ್ಲಿ ಲಗತ್ತಿಸಲಾಗಿದೆ.

3) ಗ್ರಾಮೀಣ ಆಶ್ರಯ ನಿವೇಶನ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ವಸತಿ ಇಲ್ಲದವರಿಗೆ ನಿವೇಶನ ಒದಗಿಸಲು ಆಯಾ ಜಿಲ್ಲಾಧಿಕಾರಿಗಳು ಸರ್ಕಾರದ ಮಾರ್ಗಸೂಚಿ ಬೆಲೆಗೆ ಖಾಸಗಿ ಭೂಮಿ ಖರೀದಿಸಿ ನಿವೇಶನ ಹಂಚಲು ಅಧಿಕಾರ ನೀಡಲಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಜೊತೆಗೆ ಸರ್ಕಾರಿ ಭೂಮಿಯನ್ನು ಸಹಾ ಬಡವರಿಗೆ ವಸತಿ ನಿವೇಶನಗಳಾಗಿ ಕಾನೂನು ರೀತಿ ಹಂಚಲು ಅವಕಾಶವಿದೆ.

4) 2005–06 ಮತ್ತು 2006–07ನೇ ಸಾಲಿನಲ್ಲಿ ಇದುವರೆಗೆ ಒಟ್ಟು 582.22 ಎಕರೆಯ ಖಾಸಗಿ ಜಮೀನನ್ನು ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಜಮೀನಿನಲ್ಲಿ ಬಡಾವಣೆಗಳನ್ನು ರೂಪಿಸಿ ನಿವೇಶನಗಳನ್ನು ರಚಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಜಮೀನು ಖರೀದಿ ಪ್ರಸ್ತಾವನೆಗಳಿಗೆ ಸರ್ಕಾರದ ನಿಯಮಗಳ ಪ್ರಕಾರ ಮಾರ್ಗಸೂಚಿ ಬೆಲೆಗೆ 20% ಹೆಚ್ಚುವರಿ ಸೇರಿಸಿ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ.

ಇತ್ತೀಚಿಗೆ ಭೂಮಿ ಬೆಲೆ ಹೆಚ್ಚಾಗಿರುವುದರಿಂದ ಜಮೀನನ್ನು ಮಾರ್ಗಸೂಚಿ ಬೆಲೆಗೆ ಖರೀದಿ ಮಾಡಲು ತೊಂದರೆ ಉಂಟಾಗಿದೆ. ಈ ವಿಷಯವನ್ನು ಪರಿಶೀಲಿಸಲಾಗುತ್ತಿದ್ದ, ಸದ್ಯದಲ್ಲೇ ಹೊಸ ನೀತಿಯನ್ನು ರೂಪಿಸಲಾಗುವುದು.

**Annexure-2**

| Sl.No. | District Name | Sites distributed in Rural areas in 2005-06 and 2006-07 as on feb-2007 |
|---|---|---|
| 1 | BAGALKOT | 0 |
| 2 | BANGALORE RURAL | 0 |
| 3 | BANGALORE URBAN | 838 |
| 4 | BELGAUM | 405 |
| 5 | BELLARY | 344 |
| 6 | BIDAR | 0 |
| 7 | BIJAPUR | 107 |
| 8 | CHAMARAJANAGAR | 167 |
| 9 | CHIKMAGALUR | 356 |
| 10 | CHITRADURGA | 1511 |
| 11 | DAKSHINA KANNADA | 253 |
| 12 | DAVANAGERE | 762 |

| | | |
|---|---|---|
| 13 | DHARWAD | 0 |
| 14 | GADAG | 183 |
| 15 | GULBARGA | 0 |
| 16 | HASSAN | 89 |
| 17 | HAVERI | 197 |
| 18 | KODAGU | 50 |
| 19 | KOLAR | 722 |
| 20 | KOPPAL | 430 |
| 21 | MANDYA | 31 |
| 22 | MYSORE | 32 |
| 23 | RAICHUR | 0 |
| 24 | SHIMOGA | 0 |
| 25 | TUMKUR | 34 |
| 26 | UDUPI | 283 |
| 27 | UTTARA KANNADA | 101 |
| | **TOTAL** | **6895** |

**Annexure-1**

| Sl.No. | District Name | Sites list as on May-2003 |
|---|---|---|
| 1 | Bagalkot | 32094 |
| 2 | Bangalore Rural | 65612 |
| 3 | Bangalore urban | 40057 |
| 4 | Belgaum | 66967 |
| 5 | Bellary | 32806 |
| 6 | Bidar | 21656 |
| 7 | Bijapur | 36983 |

| | | |
|---|---|---|
| 8 | Chamarajanagar | 48228 |
| 9 | Chikmagalur | 30015 |
| 10 | Chitradurga | 89944 |
| 11 | Dakshina Kannada | 19390 |
| 12 | Davanagere | 54881 |
| 13 | Dharwad | 21685 |
| 14 | Gadag | 23851 |
| 15 | Gulbarga | 45517 |
| 16 | Hassan | 20741 |
| 17 | Haveri | 34166 |
| 18 | Kodagu | 11182 |
| 19 | Kolar | 46368 |
| 20 | Koppal | 33999 |
| 21 | Mandya | 42939 |
| 22 | Mysore | 46555 |
| 23 | Raichur | 41097 |
| 24 | Shimoga | 38001 |
| 25 | Tumkur | 71966 |
| 26 | Udupi | 10544 |
| 27 | Uttara Kannada | 15742 |
| | **Total** | **1042986** |

**ಶ್ರೀ ಬಿ.ಶಿವರಾಂ :–** ಮಾನ್ಯ ವಸತಿ ಸಚಿವರು ಕಾಣೆಯಾಗಿದ್ದಾರೆ?

**ಅಧ್ಯಕ್ಷರು :–** ವಸತಿ ಸಚಿವರ ಪರವಾಗಿ ಯಾರಾದರೂ ಉತ್ತರವನ್ನು ಕೊಡುತ್ತೀರಾ? ಮಾನ್ಯ ಸಂಸದೀಯ ಸಚಿವರಾದ ಪ್ರಕಾಶ್‌ರವರೆ, ವಸತಿ ಸಚಿವರು ರಾಜನಹಳ್ಳಿ ಗುರುಗಳು ತೀರಿಕೊಂಡಿರುವುದರಿಂದ ಅಲ್ಲಿಗೆ ಹೋಗಿದ್ದಾರೆ.

**ಶ್ರೀ ಬಿ.ಶಿವರಾಂ** :– ಮಾನ್ಯ ಅಧ್ಯಕ್ಷರೆ ಇದಕ್ಕೆ ಉತ್ತರವನ್ನು ಒದಗಿಸಿದ್ದಾರೆ, 2003 ಜೂನ್ ಸಮೀಕ್ಷೆಯ ಆಧಾರದ ಮೇಲೆ ಈ ರಾಜ್ಯದಲ್ಲಿ ವಿಶೇಷವಾಗಿ ಗ್ರಾಮಾಂತರ ಪ್ರದೇಶದಲ್ಲಿ 10,42,986 ನಿವೇಶನ ರಹಿತರು ಇದ್ದಾರೆಂದು ಉತ್ತರದಲ್ಲಿ ಹೇಳಿದ್ದೀರಿ. ಹೋದ ವರ್ಷ 9 ತಿಂಗಳ ಅವಧಿಯಲ್ಲಿ ಇಲ್ಲಿಯವರೆಗೆ ನಿವೇಶನ ರಹಿತರಿಗೆ ಕೊಟ್ಟಿರುವಂತಹ ನಿವೇಶನಗಳ ಸಂಖ್ಯೆ ಎಷ್ಟು ಎಂದರೆ, 6895, ಈ ರಾಜ್ಯದಲ್ಲಿ ಸರ್ಕಾರದವರು ಘೋಷಣೆ ಮಾಡಿರುವಂತೆ ಎಲ್ಲರಿಗೂ ಕೂಡ ವಸತಿಯನ್ನು ಒದಗಿಸಿ, ವಸತಿ ಇಲ್ಲವೆನ್ನುವಂತಹವರು ಯಾರು ಇರಬಾರದು ಎನ್ನುವಂತಹ ಘೋಷಣೆಯನ್ನು ಮಾಡಿದ ಮೇಲೆ ನಿವೇಶನವೇ ಇಲ್ಲದೇ ನೀವು ವಸತಿಯನ್ನು ಒದಗಿಸುವುದು ಹೇಗೆ ಸಾಧ್ಯ? ಈ ಸರ್ಕಾರಕ್ಕೆ ನಿವೇಶನರಹಿತ ಫಲಾನುಭವಿಗಳಿಗೆ ನಿವೇಶನ ಒದಗಿಸತಕ್ಕಂಹದಕ್ಕೆ ಏನು ತೊಂದರೆ ಇದೆ? ನೀವು ಮಾರ್ಗಸೂಚಿಯನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ? ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ, ಬಡವರ ಬಗ್ಗೆ ಕನಿಷ್ಟ ನಿಮಗೆ ಸೌಜನ್ಯ ಇರಬೇಕಲ್ಲಾ? ನಿವೇಶನ ರಹಿತರು ಗ್ರಾಮಾಂತರ ಪ್ರದೇಶದಲ್ಲಿ ಇದ್ದರೆ ಅವರು ಎಷ್ಟರಮಟ್ಟಿಗೆ ಇರುತ್ತಾರೆಂಬ ಕಲ್ಪನೆ ನಿಮಗೆ ಇರಬೇಕು. ಈ ಸ್ಥಿತಿಯಲ್ಲಿ ಸರ್ಕಾರದ ಒಂದು ತೀರ್ಮಾನವೇನು? ತಾವು ಕೊನೆಯಲ್ಲಿ ಹೇಳುತ್ತೀರಿ, ಮಾರ್ಗಸೂಚಿ ಬೆಲೆಗೆ ಖರೀದಿ ಮಾಡಲು ತೊಂದರೆ ಉಂಟಾಗಿದೆ, ಈ ವಿಷಯವನ್ನು ಪರಿಶೀಲಿಸಿಲಾಗುತ್ತಿದ್ದು, ಸದ್ಯದಲ್ಲಿ ಹೊಸ ನೀತಿಯನ್ನು ರೂಪಿಸಲಾಗುವುದು ಎಂದು ಹೇಳಿದ್ದೀರಿ. 3 ವರ್ಷ 9 ತಿಂಗಳು ಕಳೆದ ಮೇಲೆ ಸಾಧಾರಣ 10.5 ಲಕ್ಷ ನಿವೇಶನ ರಹಿತರು ಇದ್ದಾಗ 6895 ನಿವೇಶನಗಳನ್ನು ಕೊಟ್ಟು 3 ವರ್ಷ 9 ತಿಂಗಳು ಕಳೆದ ಮೇಲೆ ನೀತಿಯನ್ನು ನಾವು ರೂಪಿಸುತ್ತೇವೆಂಬ ಮಾತನ್ನು ಹೇಳುತ್ತೀರಿ. ವಸತಿ ರಹಿತರನ್ನು ನೀವು ಗುರುತಿಸಿದ್ದೀರಿ, ನಿವೇಶನಗಳು ಇಲ್ಲದೆ ನೀವು ಹೇಗೆ ಮನೆಯನ್ನು ಕಟ್ಟುತ್ತೀರಿ? ತಾವು ಮುಂದಿನ ರೂಪುರೇಷೆಯನ್ನು ಯಾವಾಗ ರೂಪಿಸುತ್ತಿದ್ದೀರಿ? ಯಾವಾಗ ನೀವು ನಿವೇಶನ ರಹಿತರಿಗೆ ನಿವೇಶನಗಳನ್ನು ಒದಗಿಸುತ್ತೀರಿ?

**ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು)( ವಸತಿ ಸಚಿವರ ಪರವಾಗಿ)** :– ಮಾನ್ಯ ಅಧ್ಯಕ್ಷರೆ, ಈಗ ತಮಗೆ ಗೊತ್ತಿರುವಂತೆ ಇತ್ತೀಚೆಗೆ ಮಾರುಕಟ್ಟೆಯ ಬೆಲೆ ವಿಪರೀತವಾಗಿ ಹೆಚ್ಚಿರುವುದರಿಂದ ಮಾರ್ಗಸೂಚಿ ಬೆಲೆಯ ಆಧಾರದ ಮೇಲೆ ಅಲ್ಲಿ ಯಾರು ಕೂಡ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಶೇಕಡ 20%ನ್ನು ಕೂಡ ಮಾಡಿ ನೀವು ಅವರಿಗೆ ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕಳುಹಿಸಿದ್ದಾರೆ. 20% ಹೆಚ್ಚು ಮಾಡಿದಾಗಲೂ ಕೂಡ ಅಲ್ಲಿ ಭೂಮಿಯನ್ನು ಖರೀದಿಗೆ ಕೊಡುವಂತಹ ಜನರು ಯಾರು ಇಲ್ಲ. ಒಂದು ಸನ್ನಿವೇಶದ ಹಿನ್ನೆಲೆಯಲ್ಲಿ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್ 100ಕ್ಕೆ 100 ರಷ್ಟು ತೆಗೆದುಕೊಳ್ಳಬೇಕೆಂದು ನಿಯಮ ಇದೆ.

ಈ ಹಿನ್ನೆಲೆಯಲ್ಲಿ ಹೊಸ ನೀತಿಯ ಅರ್ಥ ಇಷ್ಟೆ, ಪ್ರಾಯಶಃ ನಾವು ಒಂದು ವೇಳೆ ನಿವೇಶನಗಳನ್ನು ಕೊಡಲೇಬೇಕೆಂಬ ಅನಿವಾರ್ಯತೆಯು ಇದ್ದರೆ ಮಾರುಕಟ್ಟೆಯ ಬೆಲೆ ಹಾಗೂ ಮಾರ್ಗಸೂಚಿಯ ಬೆಲೆಗಳೆರಡನ್ನೂ ಆಧಾರವಾಗಿಟ್ಟುಕೊಂಡು Housing Board ನವರು ಮಾಡಿದಂತಹ ರೀತಿಯಲ್ಲಿ ಹೆಚ್ಚುವರಿಯಾಗಿ ಹಣವನ್ನು ಕೊಡುವಂತಹದ್ದನ್ನು ಮಾಡಿ ಭೂಮಿಯನ್ನು ಖರೀದಿ ಮಾಡಬೇಕೆಂಬ ಪ್ರಸ್ತಾಪವು ಈಗಾಗಲೇ ಸರ್ಕಾರದ ಮುಂದೆ ಇದೆ. ತಾವು ಹೇಳಿದಂತೆ ನಿವೇಶನಗಳು ಇಲ್ಲದೆ ಮನೆಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಎಲ್ಲಿ ಹಳೆಯ ಜಾಗಗಳು ಇದ್ದು ಅಲ್ಲಿಯೇ ಅವರು ಕಟ್ಟಿಸಿಕೊಳ್ಳುತ್ತೇವೆಂದರೆ ಅವರಿಗೂ ಕೂಡ ಕೊಡುತ್ತೇವೆ. ನಿವೇಶನಗಳು ಇಲ್ಲದೆ ಇರುವಂತಹ ಅಣ್ಣತಮ್ಮಂದಿರುಗಳಿಗೆ, ಬೇರೆ ಬೇರೆಯಾಗಿದ್ದವರಿಗೆ ಖರೀದಿ ಮಾಡಿ ಕೊಡಬೇಕಾಗುತ್ತದೆ. ಕೊಡುವುದರಲ್ಲಿ ವಿಳಂಬವಾಗಿರುವುದು ನಿಜ. ನಮ್ಮ ಗುರಿ 6 ಲಕ್ಷ ಮನೆಗಳನ್ನು ಕಟ್ಟಬೇಕೆಂದು ಈ ಸಾರಿಯೂ ಸಹ ಹೇಳಿದ್ದೇವೆ. ಕಳೆದ ಬಾರಿ 3 ಲಕ್ಷ ಮನೆಗಳನ್ನು ಕಟ್ಟಬೇಕಾಗಿತ್ತು. ಇಂತಹ ತಾಂತ್ರಿಕ ಕಾರಣಗಳಿಗಾಗಿ ತೊಂದರೆಯಾಗಿದೆ ಆ ಕಾರಣಕ್ಕಾಗಿ ತ್ವರಿತಗತಿಯಲ್ಲಿ ಈ ಬಾರಿ ಅದಕ್ಕೆ ಹೆಚ್ಚಿನ ಚಾಲನೆಯನ್ನು ಕೊಡುತ್ತೇವೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** :– ಏನಾದರೂ ಮಾಡಿ ಅದನ್ನು Ground floor, Ist floor, IInd floor, ಕಟ್ಟುವ ಬಗ್ಗೆ ಸರ್ಕಾರದವರು ಆಲೋಚನೆಯನ್ನು ಮಾಡಬೇಕು. ಎಲ್ಲಾ ಕಡೆ ರೆವಿನ್ಯೂ ಲ್ಯಾಂಡ್‌ನ್ನು ತೆಗೆದುಕೊಂಡು ಮನೆಗಳನ್ನು ಕಟ್ಟುವ ಬದಲು ಒಂದು Housing Area, Quarters type, apartment ಏನಾದರೂ ಮಾಡುವ ಬಗ್ಗೆ ಆಲೋಚನೆಯನ್ನು ಮಾಡುತ್ತಿದ್ದೀರಾ? ಏಕೆಂದರೆ Infrastructure ಗೆ, ನೀರಿಗೆ, ಲೈಟ್‌ಗೆ ನಮಗೆ ಬಹಳ ಹೆಲ್ಪ್ ಆಗುತ್ತದೆ. ಒಂದೇ ಒಂದು ಮನೆಯನ್ನು ಕಟ್ಟುವ ಸೈಟ್‌ನಲ್ಲಿ 25 ಮನೆಗಳನ್ನು ಕಟ್ಟಬಹುದು, 50 ಮನೆಗಳನ್ನು ಕಟ್ಟಬಹುದು, ಅದಕ್ಕೆ ಬೇಕಾಗುವಂತಹ ಕಾಸ್ಟ್ ಸಹ ಕಡಿಮೆಯಾಗುತ್ತದೆ. ಆ ರೀತಿ ಏನಾದರೂ ವ್ಯವಸ್ಥೆ ಮಾಡುವಂತಹದ್ದು ಇದೆಯಾ?

**ಶ್ರೀ ಬಿ. ಶಿವರಾಂ** :– ನಾವು ಮೊನ್ನೆ ದಿನ ಈ ಬಗ್ಗೆ ಸುದೀರ್ಘವಾಗಿ ಚರ್ಚೆಯನ್ನು ಮಾಡಿದ್ದೇವೆ. ಗ್ರಾಮ ಪಂಚಾಯಿತಿಗಳಲ್ಲಿ ಫಲಾನುಭವಿಗಳ ಆಯ್ಕೆಯು ಇನ್ನು ಅಂತಿಮವಾಗಿಲ್ಲ, ಮೂಲಭೂತವಾಗಿ ಕಾರಣವೇನು ಎಂದರೆ, ನಿವೇಶನ ಇಲ್ಲದೆ ಇರುವುದೇ ಕಾರಣ. ಇನ್ನು ಎರಡನೆಯದು, ನೀವು ಲಭ್ಯ ಇರುವವರಿಗೆ ನಿವೇಶನ, ಮನೆಯನ್ನು ಕೊಡುತ್ತೇವೆಂದು ಹೇಳುತ್ತೀರಿ. ನಿವೇಶನಗಳನ್ನು ಹೊಂದಿರುವವನು ಸಾಮಾನ್ಯವಾಗಿ ಒಂದು ಮನೆಯನ್ನು ಹೊಂದಿರುತ್ತಾನೆ. ಮನೆ ಇದ್ದವರಿಗೆ ಮನೆಯನ್ನು ಕೊಡುವಂತಹದ್ದು ಪಂಚಾಯಿತಿ ಆಯ್ಕೆಯಲ್ಲಿ ತೊಂದರೆ ಇದೆ. ಮನೆಯಿಲ್ಲವೆಂದು ಗುರುತಿಸುವಾಗ ನಿವೇಶನ

ರಹಿತರಿಗೆ ಸರ್ಕಾರದವರು ಜವಾಬ್ದಾರಿಯನ್ನು ಅರಿತು ನಿವೇಶನಗಳನ್ನು ಕೊಡುವಂತಹ ಕೆಲಸವನ್ನು ಮಾಡುವುದಿಲ್ಲವೋ, ಅಲ್ಲಿಯವರೆಗೆ ವಸತಿ ರಹಿತರ ಪಟ್ಟಿಯನ್ನು ಕಡಿಮೆ ಮಾಡುವುದು ಅಸಾಧ್ಯ. ಸರ್ಕಾರಿ ಭೂಮಿ ಅಲ್ಲಿ ಇಲ್ಲಿ ಲಭ್ಯತೆ ಇದೆ. ಕನಿಷ್ಟ ಸರ್ಕಾರದವರು ಸರ್ಕಾರಿ ಭೂಮಿಯನ್ನು ಮೀಸಲು ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಇಲ್ಲಿಯವರೆವಿಗೂ ಮಾಡಿಸಿದ್ದೀರಾ? ಈಗ ನಮಗೆ ಗೊತ್ತು ಫಾರಂ ನಂ.50–53 ರಲ್ಲಿ ಬಗರ್ ಹುಕುಂ ಬಗ್ಗೆ ಎಲ್ಲಾ ಕಡೆಗಳಲ್ಲಿ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಈಗ ನಾವು ಅವರನ್ನು ತೆರವು ಮಾಡಿಸುವುದು ಕಷ್ಟ. ಆದರೆ ನಿವೇಶನ ರಹಿತರಿಗೆ ಮೀಸಲಾತಿ ಮಾಡುವುದಕ್ಕೆ ಮತ್ತು ಕೋರ್ಟ್ ಆದೇಶ ಎರಡು ಇರುವುದರಿಂದ ಆ ದಿಕ್ಕಿನಲ್ಲಿ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ, ಆ ಭೂಮಿಯನ್ನಾದರೂ ಪಡೆಯುವುದರ ಮೂಲಕ ನಿವೇಶನರಹಿತರಿಗೆ ನಿವೇಶನವನ್ನು ಒದಗಿಸುವಂತಹ ವ್ಯವಸ್ಥೆಯ ಬಗ್ಗೆ ಚಿಂತನೆಯನ್ನು ಮಾಡಿಲ್ಲ. ಇನ್ನು ಎರಡನೆಯದು, ಇವತ್ತು ಬೆಲೆಯೂ ನಿರಂತರವಾಗಿ ಏರುತ್ತಿರುವುದರಿಂದ ಭೂಮಿ ಬೆಲೆ ಇವತ್ತು ಹೊಸದಾಗಿ ಏನು ಏರಿಕೆಯಾಗುತ್ತಿಲ್ಲ. ಇದು ನಿರಂತರವಾಗಿರುವಂತಹ ವ್ಯವಸ್ಥೆ ಕಾಲಕಾಲಕ್ಕೆ ತಕ್ಕಂತೆ ನಾವು ನೀತಿ ನಿಯಮಗಳನ್ನು ಬದಲಾವಣೆ ಮಾಡುವುದರ ಮೂಲಕ ಸರಿಯಾದಂತಹ ಮಾರ್ಗಸೂಚಿಯನ್ನು ಕೊಟ್ಟು ನಿವೇಶನ ರಹಿತರನ್ನು ಕಡಿಮೆಗೊಳಿಸುವಂತಹ ವ್ಯವಸ್ಥೆಯನ್ನು ಸರ್ಕಾರದವರು ರೂಢಿಸಬೇಕಾದ ಜವಾಬ್ದಾರಿ ಹೌದೋ ಅಲ್ಲವೋ? ಈ ದಿಕ್ಕಿನಲ್ಲಿ ಸರ್ಕಾರದ ಪ್ರಯತ್ನವೇನು? ಸರ್ಕಾರಿ ಭೂಮಿಯಾದ ಗೋಮಾಳವನ್ನು ಮೀಸಲು ಮಾಡುವುದು. ಇವತ್ತಿನ ಬಲೆಗಳಿಗೆ ತಕ್ಕಂತೆ ಸರ್ಕಾರದವರು ಕೊಳ್ಳುವಂತಹ ವ್ಯವಸ್ಥೆಗೆ ಒಂದು ರೂಪುರೇಷೆಯನ್ನು ರೂಪಿಸುವುದು. at least market value ಇವತ್ತು 2 ಲಕ್ಷವಿದ್ದರೆ ಮುಂದಿನ ವರ್ಷಕ್ಕೆ 3 ಲಕ್ಷ ಆಗುತ್ತದೆ. ಇದು ಗೊತ್ತಿರುವಂತಹ ವಿಷಯವಾಗಿದೆ. ನಿವೇಶನ ರಹಿತರ ಸಂಖ್ಯೆಯನ್ನು ಕಡಿಮೆ ಮಾಡಬೇಕು, ನಿವೇಶನರಹಿತರಿಗೆ ನಿವೇಶನವನ್ನು ಕೊಡುವಂತಹ ಜವಾಬ್ದಾರಿ ನಮ್ಮದು ತಾನೇ. ಅದು ಯಾವುದೇ ಸರ್ಕಾರವಿರಲಿ, ಒಂದು ಕಾಲದಲ್ಲಿ ಬಂಗಾರಪ್ಪನವರ ಸರ್ಕಾರವಿದ್ದಾಗ ಅವರು ಜಿಲ್ಲಾಧಿಕಾರಿಗಳಿಗೆ ಒಂದು ಟಾರ್ಗೆಟ್‌ನ್ನು ಫಿಕ್ಸ್ ಮಾಡಿ, ಇಷ್ಟು ದಿವಸದೊಳಗಡೆ ಇಷ್ಟು ಲಕ್ಷ ನಿವೇಶನಗಳನ್ನು ನೀವು ಕೊಡಲೇಬೇಕು? ಅಂದರೆ ಅವರ ಬದ್ಧತೆ ಮತ್ತು ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡುವಂತೆ ಮಾಡಿದರು. ಆ ಕೊರತೆಯಿಂದ ಇವತ್ತು ನಿವೇಶನ ರಹಿತರಿಗೆ ನಿವೇಶನ ಈ ರಾಜ್ಯದಲ್ಲಿ ಸಿಗುತ್ತಿಲ್ಲವೆ ಹೊರತು ಬೇರೆ ಸಮಸ್ಯೆಯಲ್ಲವೆಂದು ನನ್ನ ಅನಿಸಿಕೆಯಾಗಿದೆ. ಆ ಮಾರ್ಗದಲ್ಲಿ ತಾವು ಏನು ನೀತಿಯನ್ನು ಪ್ರಕಟಣೆ ಮಾಡುತ್ತೀರೆಂದು ನಮಗೆ ಸ್ಪಷ್ಟ ಮಾಡಬೇಕು.

**ಶ್ರೀ ಎಂ.ಪಿ. ಪ್ರಕಾಶ್** : – ಮಾನ್ಯ ಸದಸ್ಯರುಗಳಾದ ಶ್ರೀ ಶಿವರಾಂ ಹಾಗೂ ಶ್ರೀ ಜೆ.ಸಿ. ಮಾಧುಸ್ವಾಮಿಯವರುಗಳು ಒಳ್ಳೆಯ ಸಲಹೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. ಅವರೇನು ಬಂಗಾರಪ್ಪನವರ ಕಾಲದ ಉದಾಹರಣೆಯನ್ನು ಕೊಟ್ಟಿದ್ದಾರೆ. ರಾಜಕೀಯ ಇಚ್ಛಾಶಕ್ತಿ ಇತ್ತು, ಒತ್ತಡಗಳು ಇದ್ದವು, ಆಗಿಯೇ ತೀರಬೇಕೆಂದು ಇತ್ತು. ಆಗಲೂ ಕೂಡ ಒಂದು ಸೂಚ್ಯಕವನ್ನು ಗಮನಿಸಿದ್ದೆ. ಆಗ ಪಾರ್ಕು, ಏನಿತ್ತು ಎಲ್ಲವನ್ನು ತೆಗೆದು ಇದು ಖಾಲಿ ನಿವೇಶನ ಎಂದು ಎಲ್ಲಿ ಬೇಕೆಂದರಲ್ಲಿ ಮಧ್ಯದಲ್ಲಿ ಸ್ಲಮ್ ಕ್ರಿಯೇಟ್ ಮಾಡಿರುವುದು ಅವತ್ತಿನ ಕಾಲದಲ್ಲಿ ಟೀಕೆ ಇತ್ತು. ಆದರೆ ತಾವು ಕೂಡ ಈ ವಿಚಾರದಲ್ಲಿ ಸಂಪೂರ್ಣ ಮಾಹಿತಿ ಇರುವಂತಹವರು, ಕಾನೂನು ಕ್ರಮಗಳ ಬಗ್ಗೆ ಗೊತ್ತಿರುವುದರಿಂದ ಫಾರಂ.ನಂ.53–54ರ ಅರ್ಜಿಗಳ ವಿಚಾರದಲ್ಲಿ ಅಲ್ಲಿ ಸಮಿತಿಗಳು ರಚನೆಯಾಗಿಲ್ಲ. ಅದನ್ನು ಪದೇ ಪದೇ ಪ್ರತಿ ಸಲ ಇಲ್ಲಿ ಬಂದು ಅಮೆಂಡ್‌ಮೆಂಟ್ ಮಾಡಿ 2 ವರ್ಷಕ್ಕೆ ಮುಂದಕ್ಕೆ ಹಾಕುವಂತಹದ್ದು, 3 ವರ್ಷಕ್ಕೆ ಮುಂದಕ್ಕೆ ಹಾಕುವಂತಹದ್ದು, ಅದನ್ನು ಕೂಡ ನಾವು ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ನೀವು ಹೇಳಿರುವುದು ಒಂದು ಏನೆಂದರೆ, ಬೆಲೆ ಹೆಚ್ಚಾದರೂ ಚಿಂತೆಯಿಲ್ಲ, ಖರೀದಿ ಮಾಡಬೇಕಾದುದು ಇದೆ. ನಾವು ಭೂಸ್ವಾಧೀನ ಪ್ರಕ್ರಿಯೇಗೆ ಹೊಸ ಕಾನೂನನ್ನು ಮಾಡಿದಾಗಲೂ ಕೂಡ ಆ ನಿವೇಶನ ರಹಿತರಿಗೆ ಆಶ್ರಯ ಯೋಜನೆಯಲ್ಲಿ ಕೊಡುವಂತಹದ್ದು ಕಾನೂನು ಪ್ರಕ್ರಿಯೆಯಲ್ಲಿ ಕೂಡ ವಿಳಂಬವಾಗುವುದಕ್ಕೆ ಸಾಧ್ಯತೆ ಇದೆ. ಆ ಕಾರಣಕ್ಕಾಗಿಯೇ consent award ಗಳನ್ನು ಮಾಡಿಕೊಂಡು ಅದನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳಿ ಈಗಾಗಲೇ 100% ಕೊಡಿ ಎನ್ನುವಂತಹ ಒಂದು ಪ್ರಸ್ತಾವ ಇದೆ. ಆದರೆ ತಾವು ಹೇಳಿದ ಸಲಹೆಯನ್ನು ಖಂಡಿತವಾಗಿಯೂ ಕೂಡ ಈ ಸಲ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡುತ್ತೇವೆ. ಖಂಡಿತವಾಗಿಯೂ ಕೂಡ ನಿವೇಶನ ರಹಿತರಿಗೆ ಅಲ್ಲಿರುವಂಥ ನಿವೇಶನ ಬಿಟ್ಟು ಹೊರಗಡೆಗೆ ಇರುವಂಥದ್ದನ್ನು ಕೊಡಬೇಕಾಗುತ್ತದೆ. ತಾವು ಹೇಳಿದಂತೆ 10 ಲಕ್ಷ 48 ಸಾವಿರ ನಿವೇಶನ ರಹಿತರು ಮುಂದಿನ ದಿನಮಾನಗಳಲ್ಲಿ ಹೆಚ್ಚು ಆಗುತ್ತಾರೆಯೇ ವಿನಃ ಕಡಿಮೆ ಆಗುವ ಪ್ರಶ್ನೆಯೇ ಇಲ್ಲ. ಏಕೆಂದರೆ ಜನಸಂಖ್ಯೆ ಕೂಡ ಹೆಚ್ಚಾಗುತ್ತಿದೆ. ಕುಟುಂಬಗಳು ವಿಭಜನೆ ಆಗುತ್ತದೆ, ಈ ಎಲ್ಲಾ ಕಾರಣಗಳಿಗೆ ಅವು ಹೆಚ್ಚಾಗುತ್ತವೆ. ಆದ್ದರಿಂದ ತಾವು ಹೇಳಿದ ಸಲಹೆಯನ್ನು ಮಾನ್ಯ ಮಂತ್ರಿಗಳು ಬಂದ ತಕ್ಷಣ ಸರ್ಕಾರ ಈ ಬಗ್ಗೆ ಒಂದು ನೀತಿಯನ್ನು ರೂಪಿಸುತ್ತೇವೆಂದು ಏನು ಹೇಳಿದ್ದೇವೆ. ಅದರಲ್ಲಿ ತಮ್ಮ ಸಲಹೆಗಳನ್ನು ಕೂಡ ಅಳವಡಿಸುತ್ತೇವೆ. ಎರಡನೆಯದಾಗಿ ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಬಹುಮಹಡಿ ಕಟ್ಟಡಗಳನ್ನು 2–3 ಅಂತಸ್ತುಗಳ ಕಟ್ಟಡವನ್ನು ಮಾಡಬಾರದು, ಭೂಮಿಯ ಲಭ್ಯತೆ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಆ ಹಳ್ಳಿಗಳಲ್ಲಿ ಇಂಥ ಒಂದು ಪ್ರಯೋಗವಾಗಿಲ್ಲ, ಜನಗಳಿಗೆ ಮುಂದೆ ಅವರು ದನ ಕಟ್ಟಲಿಕ್ಕೆ ಇನ್ನೇನಾದರೂ ಹೊಟ್ಟು, ಮೇವು, ಕಟ್ಟಿಗೆ,

ಕುಳ್ಳು, ಇಟ್ಟುಕೊಳ್ಳುವುದಕ್ಕೆ ಜಾಗ ಬೇಕೆಂದು ಕೇಳುತ್ತಲೇ ಇರುತ್ತಾರೆ. ನಾವು ಅವರಿಗೆ ಕೊಡುವುದು 30 x 40' ಸೈಟು, ಪ್ರಾಯಶಃ ತಾವು ಹೇಳಿದ ಯೋಚನೆಯನ್ನು ಮಾಡಿ 30 x 40' ರ ಸೈಟಿನ ಮುಂಭಾಗದ ಬಯಲು ಜಾಗ ಕೆಳಮನೆಯವರಿಗೆ, ಹಿಂಭಾಗದ ಬಯಲು ಜಾಗ ಮೇಲ್ಮನೆಯವರಿಗೆ ಎಂದು ಹೇಳಿ ಆ ತರಹದಲ್ಲಿ ಒಂದಿಷ್ಟು ಜಾಗ ಮಾಡಿಕೊಟ್ಟರೆ ಪ್ರಾಯಶಃ ಅಲ್ಲಿ ರೈತರ ಸಮಸ್ಯೆಗಳಿಗೆ ಅವರ ಉಪಕರಣಗಳನ್ನು ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮತ್ತೆ ಇನ್ನೊಂದು ರೀತಿಯ ಜಗಳವಾಗಬಾರದು. ಬೀಚಿಯವರು ಹೇಳುತ್ತಿದ್ದರು, ಯಾರೋ ಇಬ್ಬರು ಅಣ್ಣತಮ್ಮಂದಿರು ಬೇರೆಯಾಗಿ ಮನೆಯ ಕೆಳಮನೆ ಒಬ್ಬರಿಗೆ ಬಂತು, ಮೇಲ್ಮನೆ ಒಬ್ಬರಿಗೆ ಬಂತು, ಕೆಳಮನೆಗೆ ಬಂದ ತಮ್ಮ, ಇಲ್ಲಪ್ಪಾ ನನ್ನ ಮನೆಯನ್ನು ರಿಪೇರಿ ಮಾಡಿಕೊಳ್ಳಬೇಕಾಗಿದೆ, ನನ್ನ ಪಾಲಿಗೆ ಬಂದಿದೆ, ನಾನು ಅದನ್ನು ಕೆಡವಿ ರಿಪೇರಿ ಮಾಡಿಕೊಳ್ಳುತ್ತೇನೆ, ನೀವು ಮೇಲೆ ಹೇಗಾದರೂ ಇದ್ದುಕೊಳ್ಳಿ ಎಂದು ಹೇಳುತ್ತಾನೆ, ನಮ್ಮೂರಿನಲ್ಲಿ ಈ ರೀತಿಯ ಜಗಳಗಳು ಈ ನಡುವೆ ಜಾಸ್ತಿಯಾಗುತ್ತಿರುತ್ತವೆ. ಆದುದರಿಂದ ಇನ್ನು ಯಾವ ರೀತಿ ಪರಿಣಾಮ ಬರುತ್ತದೆಯೋ ಗೊತ್ತಿಲ್ಲ, ಆ ಕಾರಣಕ್ಕಾಗಿ, ಆದರೆ ಬಹಳ ಉತ್ತಮವಾದ ಸಲಹೆ, ಮುಂದಿನ ದಿನಗಳಲ್ಲಿ ಭೂಮಿ ಎಸ್.ಇ.ಜೆಡ್‌ನಂತೆ ಹೋರಾಟ ಆದರೂ ಆದೀತು. ಏಕೆಂದರೆ ದೂರದಲ್ಲಿ ಹಾಕಿದರೆ ಕುಡಿಯುವ ನೀರು, ವಿದ್ಯುಚ್ಛಕ್ತಿ ಒದಗಿಸಲಾಗುವುದಿಲ್ಲ. ಇದರೊಂದಿಗೆ ಹೊಸ ಜಗಳ ಕೂಡ ಇದೆ, ಇದು ತಮ್ಮ ಗಮನಕ್ಕೆ ಬಂದಿರಬಹುದು. ಒಂದು ಊರಿನಿಂದ ಒಂದು ಮೈಲಿ ಅಥವಾ ಒಂದು ಕಿ.ಮೀ ಆಚೆ ತೆಗೆದುಕೊಂಡರೆ ಅದು ಇನ್ನೊಂದು ಪಂಚಾಯಿತಿ ಬೋರ್ಡ್‌ಗೆ ಸೇರುತ್ತದೆ. ಇವರು ನಮ್ಮೂರು ಪಂಚಾಯಿತಿ ಓಟರ್ಸ್ ಅನ್ನು ಆ ಕಡೆ ಸೇರಿಸಿಬಿಟ್ಟಿರಿ ನೀವು, ಅಲ್ಲಿಗೆ ಕಳುಹಿಸಲಿಕ್ಕೆ ಬರುವುದಿಲ್ಲವೆಂದು ಜಗಳ ಮಾಡಿರುವಂಥ ಉದಾಹರಣೆಗಳೂ ಕೂಡ ಇವೆ. ಇವೆಲ್ಲವನ್ನೂ ಸೇರಿಸಿ ಖಂಡಿತವಾಗಿಯೂ ಒಂದು ನೀತಿಯನ್ನು ರೂಪಿಸುತ್ತೇವೆ, ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಬಿ. ಶಿವರಾಮು** :– ಈಗಲೇ 3 ವರ್ಷದ 9 ತಿಂಗಳೂ ಆಗಿವೆ, ಇಷ್ಟು ದಿವಸಗಳಲ್ಲಿ ಒಂದು ಕಾಲಬದ್ಧವಾಗಿ ವ್ಯವಸ್ಥೆ ಮಾಡುತ್ತೇವೆನ್ನುವುದನ್ನಾದರೂ ಪ್ರಕಟಣೆ ಮಾಡಿ.

**ಶ್ರೀ ಎಂ.ಪಿ. ಪ್ರಕಾಶ್** :– ಇಷ್ಟೇ ತಿಂಗಳೂ ಎಂದು ಹೇಳುವುದಿಲ್ಲ. ಕಾಲಬದ್ಧವಾಗಿ ನಮಗೂ ಕೂಡ ನಾಚಿಕೆ ಬಂದಿದೆ, ಏಕೆಂದರೆ ಈ ರೀತಿಯಾಗಿ ಮನೆಗಳನ್ನು ಬಡವರಿಗೆ ಕೊಡುವುದರಲ್ಲಿ ಹಣದ ಲಭ್ಯತೆ ಇದ್ದರೂ ಕೂಡ ಮಾಡಲಿಕ್ಕಾಗಿಲ್ಲ, ಆದ್ದರಿಂದ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತೇವೆ.

(ಗೊಂದಲ)

**ಅಧ್ಯಕ್ಷರು** ;– ಒಂದು ಪ್ರಶ್ನೆಗೆ ಎಷ್ಟು ಸಮಯ ಕೊಡುವುದು?

**ಶ್ರೀ ಚಿಕ್ಕನಗೌಡರು** :– ನನ್ನ ತಾಲ್ಲೂಕು ಪ್ರಾರಂಭವಾಗುತ್ತದೆ. ಅಲ್ಲಿ ಕಡಿಮೆ ಅಂದರೂ 3.00 ಲಕ್ಷ ರೂ. 4.00 ಲಕ್ಷ ರೂ. ಆ ಭೂಮಿಗೆ ಬೆಲೆಯಿದೆ. ಅಲ್ಲಿ ಏನು ಮಾಡುತ್ತಾರೆಂದರೆ ಜಿಲ್ಲಾಧಿಕಾರಿಗಳು 60,000–00, 70,000–00 ರೂ.ಗಳಿಗೆ ಕಿಮ್ಮತ್ತು ಮಾಡುತ್ತಿದ್ದಾರೆ. ಅಲ್ಲಿ ಪಕ್ಕದಲ್ಲಿ ಹುಬ್ಬಳ್ಳಿಯಲ್ಲಿ 3.00 ಲಕ್ಷ, 4.00 ಲಕ್ಷ ರೂ.ಗಳನ್ನು ಕೊಟ್ಟು ಖರೀದಿ ಮಾಡಿಕೊಂಡು ಇವತ್ತು ಅಸೆಂಬ್ಲಿ ಕಟ್ಟಲಿಕ್ಕೆ ಜಮೀನು ಕೊಟ್ಟಿದ್ದಾರೆ. ನಮಗೆ ಒಂದು ಎಕರೆಗೆ 60,000–00 ಕೊಡುತ್ತಿದ್ದಾರೆ. ಕಡಿಮೆ ದರದಲ್ಲಿ ಜಮೀನು purchase ಮಾಡಿಕೊಂಡು ಬಂದು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್‌ನಲ್ಲಿ ಪೆಂಡಿಂಗ್ ಉಳಿದಿವೆ, ಅದಕ್ಕೆ ನಾನು ತಮ್ಮ ಮೂಲಕ ವಿನಂತಿಸುತ್ತೇನೆ, ಆ ಫೈಲ್ ಏನೂ ನಮ್ಮ ಕಲಘಟಗಿ ತಾಲ್ಲೂಕಿನವು ಇವೆ, ತಕ್ಷಣ ಆ ಜಿಲ್ಲಾಧಿಕಾರಿಗಳಿಗೆ ಒಂದು ಸಂದೇಶವನ್ನು ಕೊಟ್ಟು ಅವುಗಳನ್ನು ಬಿಡುಗಡೆ ಮಾಡಿಸಬೇಕೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಜಿ. ಚಂದ್ರಣ್ಣ** :– ಇದು ಕೇವಲ ಕಲಘಟಗಿ ಅಥವಾ ಬೇರೆ ಜಾಗಗಳಲ್ಲಿ ಅಂತ ಅಲ್ಲ, ಎಲ್ಲಾ ಕಡೆಯೂ ಈ ಸಮಸ್ಯೆ ಇದೆ, ಇವತ್ತು ಉದಾಹರಣೆಗೆ ಹೇಳಬೇಕೆಂದರೆ ಬೆಂಗಳೂರು ಗ್ರಾಮಾಂತರದಲ್ಲಿ ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ ಇರಬಹುದು, ಎಲ್ಲಿಯೂ ನಾವು ಆಶ್ರಯ ಮನೆಗಳನ್ನು ಕೊಡದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಏಕೆಂದರೆ 30.00 ಲಕ್ಷ ರೂ, 40.00 ಲಕ್ಷ ರೂ., 1.00 ಕೋಟಿ ರೂ.ಗಳವರೆಗೆ ಜಮೀನುಗಳು ಹೋಗಿವೆ. ಇಂಥ ಕಡೆ ಸಮಸ್ಯೆಯನ್ನು ಬಗೆಹರಿಸುವಂಥಾದ್ದು ಆಗಬೇಕು. ಇದನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಸರಿಯಾದ ರೀತಿಯಲ್ಲಿ ಆಗಬೇಕು ಎನ್ನುವುದು ಬಹಳ ಮುಖ್ಯವಾಗಿರತಕ್ಕಂಥ ಪ್ರಶ್ನೆ, ಇಲ್ಲದಿದ್ದರೆ ಆಶ್ರಯ ಸಮಿತಿಯಿಂದ ಸೈಟುಗಳನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಮಾತನ್ನು ಅರ್ಥಮಾಡಿಕೊಳ್ಳಬೇಕು.

**ಶ್ರೀ ಎಂ.ಪಿ. ಪ್ರಕಾಶ್** :– ಈ ಸಮಸ್ಯೆ ಮಾನ್ಯ ಚಿಕ್ಕನಗೌಡರು, ಚಂದ್ರಣ್ಣನವರು ಹೇಳಿರತಕ್ಕಂಥ ವಿಚಾರದಲ್ಲಿ ಮಾನ್ಯ ಶಿವರಾಮು, ಮಾನ್ಯ ಮಾಧುಸ್ವಾಮಿಯವರು ಕೂಡ ಅದರ ಬಗ್ಗೆ ಪ್ರಸ್ತಾಪ ಮಾಡಿದರು, ಬೆಲೆ ಹೆಚ್ಚಾಗಿರುವುದರಿಂದ ನಮ್ಮ ಮಾರ್ಗಸೂಚಿ ಬೆಲೆಯನ್ನು ಹೆಚ್ಚು ಮಾಡಬೇಕಾಗುತ್ತದೆ. ಮಾರ್ಗಸೂಚಿ ಬೆಲೆಯನ್ನು ಮಾರುಕಟ್ಟೆ ದರಕ್ಕೆ ಹೊಂದಾಣಿಕೆ ಮಾಡುವುದಾಗಿದ್ದರೆ ಬಹಳ ಜನಕ್ಕೆ ತೊಂದರೆಯಾಗುತ್ತಿತ್ತು. ಕೆಲವು ಕಡೆಯೆಲ್ಲಾ ಕೆ.ಐ.ಎ.ಡಿ.ಬಿ. ಯವರು 8.00, 9.00, 10.00 ಲಕ್ಷ ರೂ.ಗಳನ್ನು ಕೊಟ್ಟೂ

ಸಹ ಖರೀದಿ ಮಾಡಿದ್ದಾರೆ. ಆದ್ದರಿಂದ ಹೊಸ ನೀತಿ ನಿರೂಪಣೆ ಮಾಡುವಂಥ ಸಂದರ್ಭದಲ್ಲಿ ಬೆಂಗಳೂರುನಂಥ ಹುಬ್ಬಳ್ಳಿಯಂಥ ದೊಡ್ಡ ದೊಡ್ಡ ನಗರ ಪ್ರದೇಶಗಳ ಪಕ್ಕದಲ್ಲಿ ಭೂಮಿಗೆ ಅನುಗುಣವಾದ ರೀತಿಯಲ್ಲಿ ಖರೀದಿ ಮಾಡಲಿಕ್ಕೆ ಈ ನೀತಿ ನಿರೂಪಣೆಯಲ್ಲಿ ಅದನ್ನು ಸೇರಿಸಿಕೊಳ್ಳುತ್ತೇವೆಂಬ ಮಾತನ್ನು ಹೇಳುತ್ತೇನೆ.

## ಶಿಕ್ಷಕರ ಮತ್ತು ಶಿಕ್ಷಕೇತರ ನೇಮಕಾತಿ

**364 (1703) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)** :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರು ಮತ್ತು ಶಿಕ್ಷಕೇತರ ನೇಮಕಾತಿ ಯಾವ ಅನುಪಾತದಲ್ಲಿ ನಡೆಸಲಾಗಿದೆ;

2) ಮುಂದಿನ ದಿನಗಳಲ್ಲಿ ಅನುಪಾತ ಮಾರ್ಗವನ್ನು ಅಳವಡಿಸಲಾಗುವುದೇ?

**ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)** :

1)

• ಒಂದು ಸರ್ಕಾರಿ ಪ್ರೌಢಶಾಲೆಗಾಗಿ ಮುಖ್ಯ ಶಿಕ್ಷಕರು ಹುದ್ದೆ ಸೇರಿದಂತೆ 8 ಬೋಧಕ ಹುದ್ದೆಗಳು ಮತ್ತು 02 ಬೋಧಕೇತರ [ದ್ವಿ.ದ.ಸ 1 ಮತ್ತು ಗ್ರೂಪ್ ಡಿ–1] ಹುದ್ದೆಗಳನ್ನು ಮಂಜೂರು ಮಾಡಲು ಆಸ್ಪದ ಇರುತ್ತದೆ.

• ಅನುದಾನಿತ ಖಾಸಗಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮಗಳು, 1999ರ ಅನೆಕ್ಸರ್ – 4ರನ್ವಯ ನಿಗದಿಪಡಿಸಿದ ಸಿಬ್ಬಂದಿ ಮಾದರಿಯ ಪ್ರಕಾರ ಪ್ರತಿಯೊಂದು ಅನುದಾನಿತ ಖಾಸಗಿ ಪ್ರೌಢಶಾಲೆಗಾಗಿ 8 ಬೋಧಕ ಮತ್ತು 2 ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲು ಆಸ್ಪದ ಇರುತ್ತದೆ.

• ಸರ್ಕಾರಿ ಪ್ರಾಥಮಿಕ ಮತ್ತು ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಿಗಾಗಿ ನಿಗದಿಪಡಿಸಿದ ಸಿಬ್ಬಂದಿ ಮಾದರಿಯ ಪ್ರಕಾರ ಬೋಧಕೇತರ ಹುದ್ದೆಗಳು ಇರುವುದಿಲ್ಲ.

2) ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ ಸದರಿ ಸಿಬ್ಬಂದಿ ಮಾದರಿಯನ್ನು ಬದಲಾಯಿಸುವ ಉದ್ದೇಶ ಇರುವುದಿಲ್ಲ.